# ಪುಣ್ಯ-ಪಾಪಗಳ ವಿಧಗಳು ಮತ್ತು ಪರಿಣಾಮ

## ಮನೋಗತ

ಜೀವನವು ಕರ್ಮಮಯವಾಗಿದ್ದು ಪ್ರತಿಯೊಂದಕ್ಕೂ ಫಲವು ನಿಶ್ಚಿತವಾಗಿದೆ. ಒಳ್ಳೆಯ ಕರ್ಮಗಳಿಗೆ ಪುಣ್ಯವು ದೊರಕಿ ಸುಖವು ಸಿಕ್ಕಿದರೆ, ಕೆಟ್ಟ ಕರ್ಮಗಳಿಂದ ಪಾಪವು ಘಟಿಸಿ ದುಃಖವು ಸಿಗುತ್ತದೆ. ಬಹಳಷ್ಟು ಸಲ 'ಸದಾಚರಣಿ ಸಜ್ಜನರೂ ಜೀವನದಲ್ಲಿ ದುಃಖವನ್ನು ಭೋಗಿಸುತ್ತಾರೆ ಮತ್ತು ಗೂಂಡಾ, ಭ್ರಷ್ಟಾಚಾರಿ ಇತ್ಯಾದಿ ಜನರು ಕೆಟ್ಟ ಕರ್ಮಗಳನ್ನು ಮಾಡುತ್ತಿದ್ದರೂ ಐಶ್ವರ್ಯಾದಿ ಸುಖಗಳನ್ನು ಭೋಗಿಸುತ್ತಿರುವುದನ್ನು' ನಾವು ನೋಡುತ್ತೇವೆ. ಇಂತಹ ದುರ್ಜನರಿಗೆ ಅವರ ಪಾಪದ ಫಲವು ಏಕೆ ಸಿಗುವುದಿಲ್ಲ ಎಂಬ ಪ್ರಶ್ನೆಯು ಯಾರದಾದರೂ ಮನಸ್ಸಿನಲ್ಲಿ ಬರಬಹುದು. ಇಂತಹ ದುರ್ಜನರಿಗೆ ಅವರ ಪೂರ್ವಪುಣ್ಯದ ಫಲವೆಂದು ಸುಖವು ಸಿಗುತ್ತಿರುತ್ತದೆ. ಅವರ ಪೂರ್ವಪುಣ್ಯವು ಮುಗಿದ ಮೇಲೆ ಅವರ ಪಾಪಕರ್ಮಗಳ ಫಲ ಅಂದರೆ ರೋಗಗಳು, ದಾರಿದ್ರ್ಯ, ಅನೇಕ ದುಃಖಗಳು ಮತ್ತು ಮೃತ್ಯುವಿನ ನಂತರ ನರಕವಾಸ ಇತ್ಯಾದಿಗಳನ್ನು ಭೋಗಿಸಲೇಬೇಕಾಗುತ್ತದೆ. ಇವುಗಳಿಂದ ಯಾರೂ ಬಿಡುಗಡೆಯಾಗಲು ಸಾಧ್ಯವಿಲ್ಲ. ಆದುದರಿಂದ ನಮ್ಮ ಪಾಪವನ್ನು ಕಡಿಮೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ. ದೈನಂದಿನ ಜೀವನದಲ್ಲಿ ಮನುಷ್ಯನಿಂದ ತಿಳಿಯದೇ ಪಾಪಕರ್ಮಗಳು ಸತತವಾಗಿ ಘಟಿಸುತ್ತಿರುತ್ತವೆ, ಉದಾ. ಗುಡಿಸುವಾಗ ಕ್ರಿಮಿಕೀಟಗಳು ಸಾಯುವುದು, ಇತರರೊಂದಿಗೆ ಕಠೋರವಾಗಿ ಮಾತನಾಡುವುದು, ಇತರರನ್ನು ದ್ವೇಷಿಸುವುದು ಇತ್ಯಾದಿ. ಸ್ವಲ್ಪದರಲ್ಲಿ ಹೇಳುವುದಾದರೆ ಮನುಷ್ಯನಿಗೆ ಪಾಪ ತಡೆಗಟ್ಟುವುದು ಅಸಾಧ್ಯವಾಗಿದೆ. ಪಾಪವನ್ನು ಕಡಿಮೆ ಮಾಡಿಕೊಳ್ಳಲು ನಮಗೆ ಪಾಪಕರ್ಮದ ಪಶ್ಚಾತ್ತಾಪವಾಗುವುದು ಮತ್ತು ಧರ್ಮವು ಹೇಳಿದ ಶಿಕ್ಷೆಯನ್ನು ಭೋಗಿಸುವುದಕ್ಕೆ 'ಪ್ರಾಯಶ್ಚಿತ್ತ' ವೆನ್ನುತ್ತಾರೆ.

ಈ ಗ್ರಂಥದಲ್ಲಿ, ಪಾಪವು ತಗಲುವ ಮತ್ತು ತಗಲದಿರುವ ವಿವಿಧ ಕಾರಣಗಳು, ಪ್ರಾಯಶ್ಚಿತ್ತ ಕರ್ಮಗಳು, ಪುಣ್ಯವನ್ನು ಹೆಚ್ಚಿಸುವುದರ ಮಹತ್ವ ಮತ್ತು ಪುಣ್ಯವನ್ನು ನಿರ್ಮಿಸುವ ಕರ್ಮಗಳ ಬಗ್ಗೆ ಮಾರ್ಗದರ್ಶನವನ್ನು ಮಾಡಲಾಗಿದೆ. ಪಾಪ-ಪುಣ್ಯಗಳಿಂದ ನಿರ್ಮಾಣವಾಗುವ ಸುಖ-ದುಃಖಗಳ ಬಂಧನದ ಆಚೆಗೆ ಹೋಗಿ ಸತತವಾಗಿ ಸಚ್ಚಿದಾನಂದ ಅವಸ್ಥೆಯಲ್ಲಿ ಇರಬೇಕಾದರೆ ನಮಗೆ ಯಾವುದೇ ಫಲ ಸಿಗದಂತಹ ಕರ್ಮಗಳನ್ನು ಮಾಡಬೇಕಾಗುತ್ತದೆ. ಕರ್ಮಫಲವನ್ನು ಹೇಗೆ ತ್ಯಾಗ ಮಾಡಬೇಕು, ಇದರ ಬಗ್ಗೆಯೂ ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

ಈ ಗ್ರಂಥವನ್ನು ಓದಿ ವಾಚಕರಿಗೆ ಪಾಪ-ಪುಣ್ಯದ ಕಡೆಗೆ ನೋಡುವ ಒಂದು ಹೊಸ ದೃಷ್ಟಿಯು ಸಿಗಲಿ ಮತ್ತು ಅವರು ಪಾಪ-ಪುಣ್ಯದ ಆಚೆಗೆ ಹೋಗಿ ಆನಂದ ಪ್ರಾಪ್ತಿಯನ್ನು ಮಾಡಿಕೊಳ್ಳಲು ಅವರಿಗೆ ಸಾಧನೆಯನ್ನು ಮಾಡುವ ಪ್ರೇರಣೆ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


೧. ಕರ್ಮದ ಪರಿಣಾಮಗಳು : ಸುಖ ಮತ್ತು ದುಃಖ; ಸಂಸ್ಕಾರ; ಪಾಪ-ಪುಣ್ಯ ಮತ್ತು ಅಹಂಭಾವ ಅಥವಾ ಕೀಳರಿಮೆ ೧೦

೨. ಪುಣ್ಯ ೧೧

* ವ್ಯಾಖ್ಯೆ ೧೧
* ಪುಣ್ಯ ಸಿಗುವ ವಿಷಯಗಳು ೧೨
* ಪೂರ್ವಪುಣ್ಯದಿಂದ ಪ್ರಾಪ್ತವಾಗುವ ವಿಷಯಗಳು ೧೪
* ಅಪರಾಧಿಯ ಪುಣ್ಯ ಪ್ರಬಲವಾಗಿರುವವರೆಗೆ ಅವನು ಸಿಗುವುದಿಲ್ಲ ೧೬
* ಪುಣ್ಯ ಸಿಗದಿರುವುದು ೧೬
* ಪುಣ್ಯದ ವಿಧಗಳು – ಶುದ್ಧ ಪುಣ್ಯ ಮತ್ತು ಅಶುದ್ಧ ಪುಣ್ಯ ೧೬
* ವ್ಯಷ್ಟಿ ಪುಣ್ಯದ ಪರಿಣಾಮಗಳು ೧೭
* ಪುಣ್ಯವನ್ನು ಸುಟ್ಟು ಹಾಕುವಂತಹ ವಿಷಯಗಳು ೧೮
* ಪುಣ್ಯವು ಮುಗಿದಿರುವುದರ ಲಕ್ಷಣಗಳು ೧೯
* ಸಾಧನೆಯನ್ನು ಮಾಡಿ ಪುಣ್ಯವನ್ನು ಹೆಚ್ಚಿಸಿಕೊಳ್ಳುವುದರ ಮಹತ್ವ ೧೯
* ಪುಣ್ಯಕರ್ಮಗಳನ್ನು ರಹಸ್ಯವಾಗಿಡಬೇಕು ೨೨

೩. ಪಾಪ ೨೩

* ವ್ಯಾಖ್ಯೆ ೨೩
* ವ್ಯವಹಾರದಲ್ಲಿ ಪಾಪಗಳನ್ನು ತಡೆಗಟ್ಟುವುದು ಅಸಾಧ್ಯವಾಗಿರುವುದು ೨೩
* ಪಾಪದ ಕಾರಣಗಳು (ಸ್ವಾರ್ಥ, ಪರನಿಂದೆ ಇತ್ಯಾದಿ) ೨೪
* ಪಾಪದ ವಿಧಗಳು ಮತ್ತು ಪರಿಣಾಮ (ಕರ್ಮವಿಪಾಕ) ೩೧
* ಪಾಪದ ತೀವ್ರತೆಗನುಸಾರ ಮೃತ್ಯುವಿನ ನಂತರ ಭೋಗಿಸಬೇಕಾಗುವ ಭೋಗಗಳು ಮತ್ತು ಸಿಗುವ ಜನ್ಮಗಳು ೪೯
* ಪಾಪದಿಂದ ಇತರರ ಮೇಲಾಗುವ ಪರಿಣಾಮಗಳು ೬೫


**ಮೇ ೨೦೨೧ ರ ವರೆಗೆ ಸನಾತನದ ೩೩೮ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಪಂಜಾಬಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೮೧,೯೯,೦೦೦ ಪ್ರತಿಗಳು !**